ಕಿರುಚಿಕೊಂಡು ಮಾತನಾಡಬೇಕು! ಹಾಗೆ ಮಾತನಾಡಿದಾಗ ಕೆಲವೊಮ್ಮೆ ಅವರಿಗೆ ಸುಮಾರಾಗಿ ಒಂದಿಷ್ಟು ಕೇಳಿಸುತ್ತದಂತೆ. ಅದೂ ಗ್ಯಾರಂಟಿ ಏನೂ ಇಲ್ಲ! ಮನೆಯವರಾದರೂ ಎಷ್ಟು ಕಿರುಚಿಯಾರು? ಕಿರುಚುವ ಬದಲು ಮೌನವಾಗಿರುವುದೇ ವಾಸಿ ಎಂದು ಅವರಿಗನ್ನಿಸಿದ್ದರೆ ಆಶ್ಚರ್ಯವೇನೂ ಇಲ್ಲ.

ರಾಮರಾಯರ ಪಕ್ಕದ ಮನೆಗೆ ಹೊಸದಾಗಿ ಒಂದು ಕುಟುಂಬ ಬಾಡಿಗೆಗೆ ಬಂದಿತ್ತು. ಅದೊಂದು ದಿನ ರಾಮರಾಯರ ಮನೆಯಲ್ಲಿ ನಡೆಯುತ್ತಿದ್ದ ಜೋರು ಗಲಾಟೆಯನ್ನು ಕೇಳಿ ಪಕ್ಕದ ಮನೆಯ ಯಜಮಾನ ಬಂದು ನೋಡಿದಾಗ – ಅದು ಗಲಾಟೆಯಲ್ಲ, ರಾಮರಾಯರಿಗೆ ಕೇಳಿಸುವ ಹಾಗೆ ಮನೆಯವರು ಅವರೊಂದಿಗೆ ಮಾತನಾಡುತ್ತಿರುವುದು ಎಂದು ಆತನಿಗೆ ಗೊತ್ತಾಯಿತಂತೆ! ಈ ಘಟನೆ ನಡೆದಾಗಿನಿಂದ ರಾಮರಾಯೊಡನೆ ಮನೆಯವರಾರೂ ಮಾತನಾಡುವ ಸಾಹಸಕ್ಕೆ ಹೋಗುತ್ತಿಲ್ಲ! ಮಾತನಾಡಿದರೆ ಅವರಿಗೆ ಕೇಳಿಸುವುದೂ ಇಲ್ಲ. ಬಂಡೆಯ ಮುಂದೆ ಎಷ್ಟು ಕೂಗಿಕೊಂಡರೆ ಏನು ಪ್ರಯೋಜನ? ಆದರೆ ಒಂದು, ಬಂಡೆಯ ಮುಂದೆ ಕೂಗಿಕೊಂಡರೆ ಪ್ರತಿಧ್ವನಿ ಬರುತ್ತದೆ! ಮಗ ಶ್ರವಣ ತಜ್ಞರಿಂದ ಸೂಕ್ತ ಶ್ರವಣಯಂತ್ರ ಕೊಡಿಸಿದರೂ ರಾಮರಾಯರು ಅದನ್ನು ಧರಿಸುವುದಿಲ್ಲ. ಅದೊಂಥರಾ ಅವರಿಗೆ ಕಿರಿಕಿರಿಯಂತೆ! ಒಟ್ಟಾರೆ ಉಳಿದವರ ಗಂಟಲಿಗೆ ವೃಥಾ ತ್ರಾಸ ಕೊಡುತ್ತಿದ್ದಾರೆ ಈ ಪುಣ್ಯಾತ್ಮ!

ರಾಮರಾಯರು ಅದೊಂದು ದಿನ ನಮ್ಮ ಮನೆಗೆ ಬಂದರು. ಅಡುಗೆಮನೆಯಲ್ಲಿ ನನ್ನ ಹೆಂಡತಿ ದೋಸೆಹಿಟ್ಟನ್ನು ಒಂದು ಪಾತ್ರೆಯಿಂದ ಇನ್ನೊಂದಕ್ಕೆ ಸುರಿಯುತ್ತಿದ್ದಳು. ಅದನ್ನು ಗಮನಿಸಿದ ಅವರು, 'ಏನಮ್ಮಾ, ಇವತ್ತು ನಿಮ್ಮ ಮನೆಯಲ್ಲಿ ತಿಂಡಿಗೆ ಇಡ್ಲಿ ಅಂತ ಕಾಣುತ್ತೆ' ಅಂದರು. ನನ್ನಾಕೆ, 'ಇಡ್ಲಿ ಅಲ್ಲ, ದೋಸೆ' ಅಂತ ಸ್ಪಷ್ಟಪಡಿಸಿದಳು.

'ಅಂದ್ಕೊಂಡೆ, ನಿಮ್ಮ ಮನೇಲಿ ಇವತ್ತು ಇಡ್ಲೀನೆ ಇರಬೇಕು ಅಂತ' ಹೀಗೆ ರಾಮರಾಯರು ಅಂದಾಗ ನನ್ನಾಕೆ ಅವರ ಜೊತೆ ಯಾರು ಗಂಟಲು ಹರಿದುಕೊಳ್ಳುತ್ತಾರೆ ಎಂದುಕೊಂಡು ನಕ್ಕು ಸುಮ್ಮನಾದಳು.

ಅದೊಂದು ಸಾರಿ ಮೂರು ದಿನಗಳಿಗೆಂದು ಬೆಂಗಳೂರಿಗೆ ನೆಂಟರೊಬ್ಬರ ಮಗನ ಮದುವೆಗೆಂದು ನಾನು ಮತ್ತು ನನ್ನ ಹೆಂಡತಿ ಹೋಗಿದ್ದೆವು. ಮದುವೆ ಮುಗಿಸಿ ಮೈಸೂರಿಗೆ ಬಂದಾಗ ರಾಮರಾಯರು ರಸ್ತೆಯಲ್ಲೇ ಸಿಕ್ಕಿದರು.

'ಎಲ್ಲಿಗೆ ಹೋಗಿತ್ತು ಸವಾರಿ? ಕಾಣ್ತಿರಲಿಲ್ಲವಲ್ಲ?...' ಅಂತ ಮಾತಿಗೆ ಮೊದಲಿಟ್ಟರು.

'ಬೆಂಗಳೂರಿಗೆ ಹೋಗಿದ್ವಿ. ನಮ್ಮ ನೆಂಟರ ಮಗನ ಮದುವೆಗೆ' ಅಂತ ನನ್ನೆಲ್ಲ ಶಕ್ತಿಯನ್ನು ಗಂಟಲಿನ ಕಡೆಗೆ ಪ್ರವಹಿಸುವಂತೆ ಮಾಡಿಕೊಂಡು ಉತ್ತರಿಸಿದೆ. ನನ್ನ ಗಂಟಲಿನ ಭೋರ್ಗರೆತವನ್ನು ಕೇಳಿ, 'ಮುದುಕನಿಗೆ ಈಯಪ್ಪ ಅದೇಕೋ ಅವಾಜ್ ಹಾಕ್ತಾ ಅವ್ನೆ' ಅಂದುಕೊಂಡು ಇಬ್ಬರು ಮೂವರು ಅಲ್ಲಲ್ಲೇ ನಿಂತು ನೋಡತೊಡಗಿದರು!

ನಮ್ಮ ಮಾತುಕತೆ ಹೀಗೆ ಸಾಗಿತು.

'ವೈಕುಂಠ ಸಮಾರಾಧನೆಗಾ?'

'ಅಲ್ಲ ಮದುವೆಗೆ!'

'ತುಂಬಾ ಹತ್ತಿರದವರೇನೋ?'

ನನಗೆ ತಲೆ ಚಿಟ್ಟು ಹಿಡಿದಂತಾಯಿತು. ಮದುವೆಗೆ ಹೋಗಿದ್ದು ಅಂತ ಹೇಳಿದ್ರೆ ಶ್ರಾದ್ಧಕ್ಕೋ ಅಂತ ಕೇಳ್ತಾ ಇದಾರೆ ಮುದುಕ! ಇದೆಂಥಾ ಕರ್ಮ. ನನಗೂ ಕಿವುಡಿದ್ದಿದ್ದರೆ ಅವರ ಮಾತು ನನಗೂ  ಕೇಳುತ್ತಿರಲಿಲ್ಲ ಅಂದುಕೊಂಡೆ.

'ಹತ್ತಿರದವರೇ ಹೌದು, ಮದುವೆಗೆ ಹೋಗಿದ್ದು ನಾವು!' – ನನ್ನ ಕೂಗಾಟಕ್ಕೆ ಇನ್ನೂ ಮೂವರು ಪ್ರೇಕ್ಷಕರು ಪ್ರತ್ಯಕ್ಷರಾದರು! ಪುಕ್ಕಟೆ ಮನರಂಜನೆ ಯಾರಿಗೆ ಬೇಡ?

'ಪಾಪ ಏನಾಗಿತ್ತಂತೆ?' – ರಾಮರಾಯರ ಪ್ರಶ್ನೆ.

'ಗ್ರಾಚಾರ ಕೆಟ್ಟಿತ್ತಂತೆ!' ನನ್ನ ಉತ್ತರ.

'ಹೋಗ್ಲಿ ಬಿಡಿ ಸಾರ್. ವಯಸ್ಸಾದವ್ರು ಪಾಪ' ಅಂತ ಅಲ್ಲಿ ಸೇರಿದವರಲ್ಲೊಬ್ಬ ನನ್ನನ್ನು ಸಮಾಧಾನ  ಮಾಡಲು ಬಂದ. ಇಲ್ಲೇ ಇನ್ನೂ ಸ್ವಲ್ಪ ಹೊತ್ತು ನಿಂತಿದ್ದರೆ ಇನ್ನೇನೇನು ಸೀನ್‌ಗಳು ಕ್ರಿಯೇಟಾಗುತ್ತವೆಯೋ ಎಂದು ಹೆದರಿ, ಅಲ್ಲಿಂದ ಮೆಲ್ಲನೆ ಜಾಗ ಖಾಲಿ ಮಾಡಿದೆ.

ರಾಮರಾಯರು ಬೆಪ್ಪನಂತೆ ನೋಡುತ್ತಾ ನಿಂತಿದ್ದರು!

## ಗಾಂಧಿ ವಿನೋದ!



ಸಾರ್ವಜನಿಕ ಹಿತಚಿಂತನೆಯ ನಡುವೆಯೂ ಗಾಂಧೀಜಿ ತಮ್ಮ ಹಾಸ್ಯಪ್ರಜ್ಞೆಯನ್ನು ಜೀವಂತವಾಗಿ ಇರಿಸಿಕೊಂಡಿದ್ದರು. ಅವರ ಸಮಯಪ್ರಜ್ಞೆ ಹಾಗೂ ವಿನೋದ ಪ್ರವೃತ್ತಿ ಕುರಿತ ಕೆಲವು ಪ್ರಸಂಗಗಳು ಇಲ್ಲಿವೆ.

### ಅರ್ಜುನರ ದಂಡು

ಗಾಂಧೀಜಿ ಸೆರೆಮನೆಯಲ್ಲಿದ್ದಾಗ ಸಾಬರಮತಿ ಆಶ್ರಮದ ಮಕ್ಕಳು ಅವರಿಗೆ ನಿಯಮಿತವಾಗಿ ಪತ್ರ ಬರೆಯುತ್ತಿದ್ದರು. ಪುಟಾಣಿಗಳ ವಿಚಿತ್ರ ಪ್ರಶ್ನೆಗಳಿಗೆ ಬಾಪೂಜಿ ತಾಳ್ಮೆಯಿಂದ ಉತ್ತರಿಸುತ್ತಿದ್ದರು. ಓರ್ವ ಪುಟಾಣಿ ತನ್ನ ಪತ್ರದಲ್ಲಿ ಬಾಪು ಅವರನ್ನು ಆಕ್ಷೇಪಿಸಿದ. 'ತಾವು ಗೀತೆಯ ಬಗ್ಗೆ ಆಗಾಗ್ಗೆ ಹೇಳುತ್ತಿರುತ್ತೀರಿ. ಗೀತೆಯಲ್ಲಿ ಅರ್ಜುನ ಒಂದೆರಡು ಪಂಕ್ತಿಗಳಲ್ಲಿ ಪ್ರಶ್ನೆ ಕೇಳಿದರೆ, ಕೃಷ್ಣನ ಉತ್ತರ ಒಂದು ಅಧ್ಯಾಯವೇ ಇರುತ್ತದೆ. ನೀವು ನೋಡಿದರೆ ನಮ್ಮ ಉದ್ದನೆಯ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸುವಿರಿ. ಏಕೆ?'

ಪುಟಾಣಿಯ ತಕರಾರಿಗೆ ಗಾಂಧೀಜಿ ನೀಡಿದ ಉತ್ತರ: 'ಕೃಷ್ಣ ಉತ್ತರ ನೀಡಬೇಕಾಗಿದ್ದುದು ಒಬ್ಬ ಅರ್ಜುನನಿಗೆ ಮಾತ್ರ. ಆದರೆ ನನ್ನ ಬಳಿ ಅರ್ಜುನರ ದಂಡೇ ಇದೆ.'

### ಸ್ಥೂಲಕಾಯ ಮಗ- ಕೃಶ ತಂದೆ

ಜಮನ್‌ಲಾಲ್ ಬಜಾಜ್ ಅವರಿಗೆ ಗಾಂಧೀಜಿ ಅವರೊಂದಿಗೆ ಪ್ರೀತಿ–ಸಲುಗೆ. ಒಮ್ಮೆ ಅವರು, 'ನಿಮ್ಮ ಪ್ರೀತಿ–ವಿಶ್ವಾಸ ನೋಡಿದರೆ ನನಗೆ ನಿಮ್ಮ ಪುತ್ರನಾಗುವ ಬಯಕೆ' ಎಂದರು. ಗಾಂಧೀಜಿ ತಮ್ಮ ಸುತ್ತಲಿದ್ದರವರಿಗೆ ತಮ್ಮನ್ನೂ ಸ್ಥೂಲಕಾಯರಾದ ಬಜಾಜ್ ಅವರನ್ನೂ ತೋರಿಸಿ ಹೇಳಿದರು: 'ತಂದೆ ತನ್ನ ಮಕ್ಕಳನ್ನು ಎತ್ತಿಕೊಳ್ಳುವುದು ಲೋಕರೂಢಿ. ಆದರಿಲ್ಲಿ, ಮಗನೇ ತನ್ನ ತಂದೆಯನ್ನು ಎತ್ತಿಕೊಳ್ಳಬೇಕಾಗಿದೆ?'

### ವರದಿಗಾರರ ಬಾಲಂಗೋಚಿ

**ವರದಿಗಾರ:** 'ಬಾಪೂಜಿ, ನೀವು ಮೃತರಾದ ಮೇಲೆ ಸ್ವರ್ಗಕ್ಕೆ ಹೋಗುತ್ತೀರೇನು?'

**ಗಾಂಧಿ:** 'ನಾನು ಸ್ವರ್ಗಕ್ಕೆ ಹೋಗುವೆನೋ ನರಕಕ್ಕೆ ಹೋಗುವೆನೋ ತಿಳಿಯದು. ಒಂದು ವಿಷಯವನ್ನಂತೂ ಸ್ಪಷ್ಟವಾಗಿ ಹೇಳಬಲ್ಲೆ. ನಾನು ಎಲ್ಲಿಗೆ ಹೋದರೂ ನೀವು ವರದಿಗಾರರು ನನ್ನ ಬೆನ್ನಿಗೆ ಬಂದಿರುತ್ತೀರಿ.'

### ಪಶು ಪ್ರವೃತ್ತಿ

'ನೀವು ಮೇಕೆಯ ಹಾಲು ಕುಡಿಯುತ್ತೀರಿ. ಪಶುಗಳ ಹಾಲು ಕುಡಿಯುವುದರಿಂದ ಮನುಷ್ಯನಿಗೆ ಪಶುವಿನ ಗುಣಗಳು ಬರುವುದಿಲ್ಲವೇ?' ಎಂದು ಅರ್ಥಶಾಸ್ತ್ರಜ್ಞರೊಬ್ಬರು ಕೇಳಿದರು. ಆಗಷ್ಟೇ ಆಡಿನ ಹಾಲು ಕುಡಿದು ನಿದ್ರಿಸಲು ಅಣಿಯಾಗುತ್ತಿದ್ದ ಗಾಂಧೀಜಿ ತಕ್ಷಣ ಪ್ರತಿಕ್ರಿಯಿಸಿದರು: 'ತಕ್ಷಣ ಇಲ್ಲಿಂದ ಓಡಿ. ಮೇಕೆಯ ಹಾಲು ಕುಡಿದಿರುವುದರಿಂದ ನಾನು ನಿಮ್ಮನ್ನು ಗುದ್ದಿಬಿಡಬಹುದು.'

ಸಂಗ್ರಹ: ರಾಜಲಕ್ಷ್ಮೀ ಭಟ್